( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.154/2015

ದಿನಾಂಕಃ 12-06-2023, ಪಿ ಡಬ್ಲ್ಯೂ–1

ಪಾಟೀ ಸವಾಲು ಃ ಶ್ರೀ ಎ ಆರ್ ಜೆ ವಕೀಲರಿಂದಃ

ನನ್ನ ತಂದೆಯ ಹೆಸರು ತಿಮ್ಮೇಗೌಡ ಉಃ ತಿಮ್ಮ ಎಂದರೆ ಸರಿ. ನಾನು ಕಂದಾಯ ಇಲಾಖೆಯಲ್ಲಿ 33 ವರ್ಷ ಸೇವೆ ಸಲ್ಲಿಸಿರುತ್ತೇನೆ. ನಾನು 1973 ರಲ್ಲಿ ಸೇವೆಗೆ ಸೇರಿ 2006 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಸಕಲೇಶಪುರ, ಹೊಳೆನರಸೀಪುರ, ಕಡೂರು, ಎನ್ ಆರ್ ಪುರ, ಮೈಸೂರು, ನಾಗಮಂಗಲ ಮತ್ತು ಸಕಲೇಶಪುರದಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಪ್ರಥಮ ದರ್ಜೆ ಗುಮಾಸ್ತನಾಗಿ ಸೇರಿಕೊಂಡು ಗ್ರೇಡ್ -2 ತಹಶೀಲ್ದಾರ್ ಆಗಿ ನಿವೃತ್ತಿ ಆಗಿರುತ್ತೇನೆ.

ನನಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ ಹಾಗೂ ನಿಯಮಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ.

ನನ್ನ ತಂದೆಗೆ ನಾಲ್ಕು ಜನ ಮಕ್ಕಳು. ಮೊದಲನೆ ಹೆಳವೇಗೌಡ, ಎರಡನೆ ರಾಮೇಗೌಡ, ಮೂರನೆ ನಾನು, ನಾಲ್ಕನೆ ಸಣ್ಣಪ್ಪ. ಸಣ್ಣಪ್ಪ ಈ ದಾವೆಯಲ್ಲಿ 3 ನೇ ಪ್ರತಿವಾದಿ ಎಂದರೆ ಸರಿ. ನನ್ನ ಇಬ್ಬರು ಅಣ್ಣಂದಿರು ಮತ್ತು ತಮ್ಮ ಮೃತರಾಗಿರುತ್ತಾರೆ. ನಾನು ಮತ್ತು ನನ್ನ ಅಣ್ಣಂದಿರು ಹಾಗೂ ನನ್ನ ತಮ್ಮ ಮುಂಚೆ ಅನ್ಯೂನ್ಯವಾಗಿದ್ದೆವು. ಈಗ ನಾನು ಮತ್ತು ನನ್ನ ಅಣ್ಣ ತಮ್ಮಂದಿರ ಕುಟುಂಬದ ನಡುವೆ ಬಾಂದವ್ಯ ಇದೆ ಎಂದರೆ ಸರಿ.

ದಾವಾ ಸರ್ವೆ ನಂ. 109/3 ರಲ್ಲಿ ಒಟ್ಟು 2 ಎಕರೆ 19 ಗುಂಟೆ ಜಮೀನಿದ್ದು ಅದರಲ್ಲಿ 4 ಗುಂಟೆ ಖರಾಬು ಜಮೀನು ಇದೆ ಎಂದರೆ ಸರಿ. ಸರ್ವೆ ನಂ. 109/3 ಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನಾನು ನೋಡಿಲ್ಲ, ನನಗೆ ಸೇರಿದ ಆಸ್ತಿಗೆ ಸಂಬಂದಿಸಿದಂತೆ ದಾಖಲೆ ನೋಡಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿದ ನಂತರ ನಾನು ದಾಖಲಾತಿಗಳನ್ನು

ಪರಿಶೀಲಿಸಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಏನು ಹೇಳಿಕೆಗಳನ್ನು ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಹೇಳಿಕೆಗಳನ್ನು ತಿಳಿದುಕೊಳ್ಳಲು ನನಗೆ ಅವಶ್ಯಕತೆ ಇರಲಿಲ್ಲ.

ದಾವಾ ಸಲ್ಲಿಸುವಾಗ 1 ನೇ ಪ್ರತಿವಾದಿಗೆ 60 ವರ್ಷ, 2 ನೇ ಪ್ರತಿವಾದಿಗೆ 59 ವರ್ಷ ವಯಸ್ಸು ಆಗಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆ ತಿಮ್ಮೇಗೌಡರು ದಾವಾ ಆಸ್ತಿಯ ಕಂದಾಯವನ್ನು ಕಟ್ಟದೇ ದಾವಾ ಆಸ್ತಿ ಸರ್ಕಾರಿ ಬೀಳು ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಂದಾಯ ಪಾವತಿಸಿದ ನಂತರ ದಾವಾ ಆಸ್ತಿ ಪುನರ್ ಸ್ಥಾಪನೆಯಾಯಿತು. ದಾವಾ ಆಸ್ತಿ ಎಷ್ಟು ವರ್ಷ ಸರ್ಕಾರಿ ಬೀಳು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಾನು ಹುಟ್ಟಿದಾಗ ದಾವಾ ಆಸ್ತಿ ಪುನರ್ ಸ್ಥಾಪನೆಯಾಗಿತ್ತು. ದಾವಾ ಆಸ್ತಿ ನಮೂನೆ 5 ಮತ್ತು 6 ರಲ್ಲಿ ಪುನರ್ ಸ್ಥಾಪನೆಯಾದ ಬಗ್ಗೆ ನಮೂದು ಇದೆ. ಪುನರ್ ಸ್ಥಾಪನೆಯಾದ ಬಗ್ಗೆ ನಾನು ಹೇಳಿರುವ ವಿಚಾರ ನಮೂನೆ 5 ಮತ್ತು 6 ರಲ್ಲಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಸರ್ವೆ ನಂಬರ್ 109/3 ಸರ್ಕಾರಿ ಜಮೀನಾಗಿದ್ದು ಅಪ್ಪಣ್ಣಿಗೌಡರಿಗೆ ದರಕಾಸ್ತು ಮೂಲಕ ಮಂಜೂರಾದ ಜಮೀನು ಎಂದರೆ ನನಗೆ ಗೊತ್ತಿಲ್ಲ. ಅಪ್ಪಣ್ಣಿಗೌಡರು ದರಕಾಸ್ತು ಆದ ನಂತರ ಬಸವೇಗೌಡರಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ದರಕಾಸ್ತು ಮುಖಾಂತರ ಮಂಜೂರಾದ ಜಮೀನನ್ನು 15 ವರ್ಷಗಳ ವರೆಗೆ ಮಾರಾಟ ಮಾಡುವಂತಿಲ್ಲ ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ. ದರಕಾಸ್ತು ಮೂಲಕ ಮಂಜೂರಾದ ನಂತರ ಮಾರಾಟ ಮಾಡಿದ್ದರಿಂದ ಸದರಿ ಮಂಜೂರಾತಿಯನ್ನು ಹಾಸನದ ಉಪವಿಭಾಗಾಧಿಕಾರಿಯವರು ರದ್ದು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನಿಪಿ-5 ರಲ್ಲಿ ನಮೂದಾಗಿರುವ ವಿಚಾರ ನನಗೆ ಗೊತ್ತಿಲ್ಲ.

ನಾನು 2014-15 ರಿಂದ 2019 ರವರೆಗಿನ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿಯು ನನಗೆ ಮ್ಯುಟೇಶನ್ ಆದ ನಂತರದ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದೇನೆ. ಕೈಬರಹದ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರೆ ಸತ್ಯ ಗೊತ್ತಾಗುತ್ತದೆ ಎಂದು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು